# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿಬಿಎಂಪಿ/ಯವ/ಕೊಉ/ಪಿಆರ್/03/2021-22

ಸಹಾಯಕ ಅಭಿಯಂತರರ ಕಛೇರಿ
ಕೊಡಿಗೇಹಳ್ಳಿ ಉಪವಿಭಾಗ, ಯಲಹಂಕ ವಲಯ
9ನೇ ಅಡ್ಡರಸ್ತೆ, ಡಿ ಬ್ಲಾಕ್
ಸಹಕಾರನಗರ, ಬೆಂಗಳೂರು 560092
ದಿನಾಂಕ: 10.11.2021

**ದಿನಾಂಕ: 10.11.2021 ರಂದು ನಡೆದ ವಾರ್ಡ್ ನಂ.08 ಸಮಿತಿಯ ಸಭೆಯ ನಡವಳಿಗಳು:-**

ಸಭೆಗೆ ಹಾಜರಿದ್ದವರು:

- ಶ್ರೀ ಜಿ. ಶ್ರೀನಿವಾಸಮೂರ್ತಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ನೋಡೆಲ್ ಅಧಿಕಾರಿಗಳ ಪರವಾಗಿ
- ಶ್ರೀ ಪ್ರವೀಣ್ ಎ.ಆರ್., ಕಿರಿಯ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ
- ಶ್ರೀ. ಜಿ. ವಿಶ್ವನಾಥ್, ಕಂದಾಯ ನಿರೀಕ್ಷಕರು, ವಾರ್ಡ್ ಸಂಖ್ಯೆ:08 ಕೊಡಿಗೇಹಳ್ಳಿ
- ಶ್ರೀಮತಿ. ಚಿಂತನ, ಸಹಾಯಕ ಅಭಿಯಂತರರು (ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ) (BWSSB)
- ಶ್ರೀ ರಾಮಲಿಂಗೆಗೌಡ, ಎ.ಎಸ್.ಐ, ಹೆಬ್ಬಾಳ ಸಂಚಾರಿ ಪೊಲೀಸ್ ಠಾಣೆ.

<u>ವಾರ್ಡ್ ಸಮಿತಿ ಸದಸ್ಯರು</u>

- ಶ್ರೀಮತಿ. ಶಾಂತಕುಮಾರಿ, ಬಾಲಾಜಿ ಬಡಾವಣೆ, ಸದಸ್ಯರು
- ಶ್ರೀ ಶ್ರೀಕಾಂತ್, ಆಮ್ಕೋ ಬಡಾವಣೆ, ಸದಸ್ಯರು
- ಶ್ರೀ ಕೃಷ್ಣಕುಮಾರ್ ಸಿ, ಡಿಫೆನ್ಸ್ ಕಾಲೋನಿ ಸದಸ್ಯರು
- ಶ್ರೀ ಜ್ಯೋತಿ ಸಿ ಅಚಾರ್ಯ, ಟಾಟಾನಗರ ಸದಸ್ಯರು

ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮಿತಿ ಕಾಯದರ್ಶಿಗಳಾದ ಶ್ರೀ. ಪ್ರವೀಣ್ ಎ.ಆರ್. ರವರು ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಮಿತಿಯ ಸದಸ್ಯರುಗಳು ಹಾಗೂ ಎಲ್ಲಾ ವೃಂದದ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು ಹಾಗೂ ಈ ಹಿಂದಿನ ಸಭೆಯಲ್ಲಿ ಚರ್ಚಿಸಿದ ಸಮಸ್ಯೆಗಳನ್ನು ಪರಿಹರಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ನೋಡಲ್ ಅಧಿಕಾರಿ ರವರು ಮಾತನಾಡುತ್ತ ಹಿಂದಿನ ಸಭೆಯ ನಡುವಳಿಗಳ ಬಗ್ಗೆ ಓದಿ ಚರ್ಚಿಸಿ, ಸಮಸ್ಯೆಗಳನ್ನು ಬಗೆಹರಿಸಿರುವ ಕುರಿತು ಹಾಜರಿದ್ದ ಅಧಿಕಾರಿಗಳಿಗೆ ಮತ್ತು ವಸತಿ ಕ್ಷೇಮಾಭಿವೃದಿ ಸಂಘದ ಸದಸ್ಯರುಗಳ ಜೊತೆಗೆ ಚರ್ಚಿಸಿದರು.

1. ಘನತ್ಯಾಜ್ಯ ನಿರ್ವಹಣೆ:
   1. ವಾರ್ಡ್ ವ್ಯಾಪ್ತಿಯ ರಸ್ತೆಯ ಬದಿಗಳಲ್ಲಿ ಕಸದ ರಾಶಿ ಕಾಣುತ್ತಿದ್ದು, ಸದರಿ ಗುತ್ತಿಗೆದಾರರು ಘನತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದಿಲ್ಲ ಎಂದು ಸಮಿತಿ ಸದಸ್ಯರು ತಿಳಿಸಿರುತ್ತಾರೆ.
   2. ಘನತ್ಯಾಜ್ಯ ನಿರ್ವಹಣೆ ವಿಭಾಗದ ಮೇಲಾಧಿಕಾರಿಗಳು ಮುಂದಿನ ಸಭೆಯಲ್ಲಿ ತಪ್ಪದೇ ಹಾಜರಾಗಬೇಕೆಂದು ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಮನವಿ ಮಾಡಿರುತ್ತಾರೆ.
   3. ಟಾಟಾನಗರದ ಮುಖ್ಯರಸ್ತೆಯಲ್ಲಿ ಬ್ಲಾಕ್‌ಸ್ಪಾಟ್ ತೆರವುಗೊಳಿಸಲು ಕ್ರಮ ತೆಗೆದುಕೊಳ್ಳುವಂತೆ ಸಭೆಗೆ ತಿಳಿಸಿದರು.
   4. ಕೊಡಿಗೇಹಳ್ಳಿ ಗ್ರಾಮದ ಗಂಗಾಭವಾನಿ ದೇವಸ್ಥಾನ ರಸ್ತೆಯಲ್ಲಿರುವ ಪರಿಕ್ರಮ ಶಾಲೆಯ ಎದುರು ಕಸದ ರಾಶಿ ಕಂಡುಬಂದಿದ್ದು ಇದನ್ನು ಸ್ವಚ್ಛಗೊಳಿಸಲು ಕ್ರಮವಹಿಸುವುದು.

2. ಆರೋಗ್ಯ ಇಲಾಖೆ:
   1. ಕೋವಿಡ್ 3ನೇ ಅಲೆ ಹರಡುವ ಸಾದ್ಯತೆಯಿದ್ದು, ಕೋವಿಡ್ ಸೋಂಕಿನ ಬಗ್ಗೆ ಎಚ್ಚರವಹಿಸಲು ಅಧಿಕಾರಿಗಳು ಸಮಿತಿ ಸದಸ್ಯರಿಗೆ ಮನದಟ್ಟು ಮಾಡಿರುತ್ತಾರೆ.
   2. ವಸತಿ ಸಮುಚ್ಚಯಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಪರಿಶೀಲಿಸಲು ನಿಯಮಿತ ತಪಾಸಣೆಯನ್ನು ಕೈಗೊಳ್ಳುವುದು.
   3. ಅಂಗಡಿಗಳ ಮಾಲೀಕರು ವ್ಯಾಪಾರ ಪರವಾನಿಗೆಯನ್ನು ಪಡೆಯದೇ ವ್ಯಾಪಾರ ಮಾಡುತ್ತಿರುವುವರ ವಿರುದ್ಧ ಕ್ರಮಕೈಗೊಳ್ಳುವುದು.

3. ಕಾಮಗಾರಿ ವಿಭಾಗ:
   1. ವಾರ್ಡ್‌ನಲ್ಲಿ ಕೆಲವು ಕಡೆ ಜರೂರಾಗಿ ಕಲವರ್ಟ್‌ಗಳ ನಿರ್ಮಾಣ ಕಾಮಗಾರಿಯನ್ನು ಮಾಡಿಕೊಡಬೇಕೆಂದು ತಿಳಿಸಿರುತ್ತಾರೆ.
   2. ಕೊಡಿಗೇಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಪಕ್ಕದಲ್ಲಿ ಕಸದ ಬ್ಲಾಕ್‌ಸ್ಪಾಟ್ ಉಂಟಾಗಿದ್ದು, ಈ ಕೂಡಲೇ ಫೆನ್ಸಿಂಗ್ ಮಾಡುವ ಅಗತ್ತ ಇರುತ್ತದೆ. ಇದರಿಂದಾಗಿ ಆರೋಗ್ಯ ಕೇಂದ್ರಕ್ಕೆ ಬರುವ ರೋಗಿಗಳು/ ಸಾರ್ವಜನಿಕರ ತೊಂದರೆ ಆಗದಂತೆ ಕ್ರಮ ವಹಿಸುವುದು.
   3. ರಸ್ತೆ ಗುಂಡಿಗಳನ್ನು ಮುಚ್ಚಲು ಅಗತ್ಯ ಕ್ರಮವಹಿಸುವುದು.

4. ವಿದ್ಯುತ್ (ಬೀದಿ ದೀಪಗಳ ನಿರ್ವಹಣೆ) ವಿಭಾಗ:
   1. ಬೀದಿ ದೀಪಗಳ ನಿರ್ವಹಣೆ ಅತ್ಯಂತ ಪ್ರಮುಖವಾದ ಕೆಲಸವಾಗಿದ್ದು, ಬೀದಿ ದೀಪಗಳನ್ನು ಅದಷ್ಟು ಸುಸ್ಥಿತಿಯಲ್ಲಿಡುವುದು.

2. ವಾರ್ಡ್ ವ್ಯಾಪ್ತಿಯಲ್ಲಿ ಆಳವಡಿಸಲಾಗಿರುವ ಎಲ್.ಇ.ಡಿ ವಿದ್ಯುತ್ ದೀಪಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವುದರ ಬಗ್ಗೆ ಕ್ರಮವಹಿಸುವುದು.
3. ಸಹಕಾರನಗರದ ಡಿಫೇನ್ಸ್ ಕಾಲೋನಿಯಲ್ಲಿ ಬೀದಿ ದೀಪಗಳ ಸಮಸ್ಯೆ ಉಂಟಾಗಿದ್ದು ಈ ಕೂಡಲೇ ಇದನ್ನು ಸರಿಪಡಿಸಲು ಕ್ರಮವಹಿಸುವುದು.

5. ಜಲಮಂಡಳಿ ವಿಭಾಗ:

1. ಕೊಡಿಗೇಹಳ್ಳಿ ರಸ್ತೆಯಲ್ಲಿ ನಿರ್ವಹಿಸಿರುವ ಒಳಚರಂಡಿ ಕಾಮಗಾರಿಯ ಇಳಿಜಾರು ಸರಿಯಿಲ್ಲದೆ ಇದ್ದು, ಇದನ್ನು ಕೂಡಲೇ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿರುತ್ತಾರೆ.
2. ತಮ್ಮ ಇಲಾಖೆ ವತಿಯಿಂದ ರಸ್ತೆ ಅಗೆದರೆ ಅದನ್ನು ನಿಯಾಮಾನುಸಾರ ಸರಿಪಡಿಸುವುದು.
3. ಮುತುರಾಯಸ್ವಾಮಿ ದೇವಸ್ಥಾನದ ರಸ್ತೆಯಲ್ಲಿ ಗುಂಡಿಯಾಗಿದ್ದು, ವಾಹನ ಸವಾರರಿಗೆ ಬಹಳಷ್ಟು ತೊಂದರೆ ಉಂಟಾಗಿದ್ದು ಈ ಕೂಡಲೇ ಸಮಸ್ಯೆ ಬಗೆಹರಿಸಲು ಕ್ರಮವಹಿಸುವುದು.

ಅಂತಿಮವಾಗಿ ನೋಡಲ್ ಅಧಿಕಾರಿಯವರು ಈ ಮೇಲ್ಕಂಡ ಅಂಶಗಳ ಬಗ್ಗೆ ವಿವರವಾಗಿ ಅಧಿಕಾರಿಗಳಿಗೆ ನಿರ್ದೇಶನ ನೀಡಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮಕೈಗೊಳ್ಳಲು ಸೂಚಿಸಿದರು ನಂತರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

(ಪ್ರವೀಣ್ ವಿ.ಆರ್.)
ಕಾರ್ಯದರ್ಶಿಗಳು ಮತ್ತು
ಕಿರಿಯ ಅಭಿಯಂತರರು
ವಾರ್ಡ್ 8, ಕೊಡಿಗೇಹಳ್ಳಿ ಉಪ

ನೋಡಲ್ ಅಧಿಕಾರಿ ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ:08